ಒಂದೂವರೆ ಶತಮಾನಗಳ ಹಿಂದೆ ಎಷ್ಟು ಕಷ್ಟವಿತ್ತೋ, ಇಂದೂ ಕೂಡಾ ಅಷ್ಟೇ ಕಷ್ಟದ್ದಾಗಿದೆ.

ಒಳ್ಳೆಯ ಸಂಪ್ರದಾಯಗಳಾದರೆ, ಇಟ್ಟುಕೊಳ್ಳಬಹುದು. ಇಂದಿನ ಸಾಮಾಜಿಕ ಪರಿಸರಕ್ಕೆ ಪ್ರಸ್ತುತವಲ್ಲದ ಸಂಪ್ರದಾಯಗಳನ್ನು ಪರಿವರ್ತಿಸಿಕೊಳ್ಳಬಾರದೇಕೆ? ಅಂದಹಾಗೆ, ಆರ್ಯಸಮಾಜದ ವಿವಾಹ ವಿಧಿಯಲ್ಲಿ 'ವರಪೂಜೆ' ಇಲ್ಲ, 'ಕನ್ಯಾದಾನ'ವಿಲ್ಲ. ದಯಾನಂದರು ಕನ್ಯಾದಾನದ ವಿಪರೀತದ ಉದಾಹರಣೆಗಳನ್ನು ಕಣ್ಣಿಂದ ನೋಡಿ, ಕಣ್ಣೀರು ಹಾಕಿದ್ದರು. ಮುಗ್ಧ ಜನರನ್ನು ಎಷ್ಟು ಸುಲಭಕ್ಕೆ 'ಕನ್ಯಾದಾನ'ದಿಂದ ಪುಣ್ಯ ಲಭಿಸುತ್ತದೆ ಎಂದು ಪೌರಾಣಿಕ ಪಂಡಿತರು ನಂಬಿಸಿದ್ದರು ಎಂದರೆ, ಆ ಕನ್ಯಾದಾನ ವಿವಾಹದಲ್ಲಿ ಮಾತ್ರ ನಡೆಯುತ್ತಿರಲಿಲ್ಲ. ಅಷ್ಟೇ ಆಗಿದ್ದರೆ ಬಹುಶಃ ದಯಾನಂದರ ಪ್ರತಿಕ್ರಿಯೆ ಇರುತ್ತಿರಲಿಲ್ಲವೇನೋ.

ಸ್ವಾಮಿ ದಯಾನಂದರು ಭಾಗಲ್ಪುರದಲ್ಲಿ ಇದ್ದಾಗ ಒಂದು ಧಾರ್ಮಿಕ ಜಾತ್ರೆ ನಡೆಯಿತು. ದಯಾನಂದರು ಸಂಜೆ ಗಂಗಾತೀರಕ್ಕೆ ಹೋದರು. ಅಲ್ಲಿ ಹಲವು ಮಂದಿ ತಂದೆ–ತಾಯಿಯರು ತಮಗೇನೋ ಪುಣ್ಯ ಬರುವುದೆಂಬ ಮಾತು ಕೇಳಿಕೊಂಡು, ವಯಸ್ಸಿಗೆ ಬಂದ ತಮ್ಮ ಹೆಣ್ಣುಮಕ್ಕಳನ್ನು ಪುರೋಹಿತರಿಗೆ ದಾನ ಮಾಡುತ್ತಿರುವುದನ್ನು ಕಂಡರು. 'ಈ ಪುರೋಹಿತರು ದಾನವಾಗಿ ಪಡೆದ ಕನ್ಯೆಯರನ್ನು ಏನು ಮಾಡುತ್ತಾರೆ?' ಎಂದು ಸ್ಥಳೀಯ ಜನರನ್ನು ದಯಾನಂದರು ವಿಚಾರಿಸಿದರು. 'ಒಬ್ಬೊಬ್ಬ ಪುರೋಹಿತ ಎಷ್ಟೆಷ್ಟೋ ಕನ್ಯೆಯರನ್ನು ದಾನವಾಗಿ ಪಡೆಯುತ್ತಾನೆ. ಆದುದರಿಂದ ಪುರೋಹಿತರು ದಾನವಾಗಿ ಬಂದ ಹೆಣ್ಣುಮಕ್ಕಳನ್ನು ಧಾರ್ಮಿಕ ಗೃಹಿಣಿಯಾಗಿ ಸ್ವೀಕರಿಸುವ ಪ್ರಸಂಗ ಲಕ್ಷಕ್ಕೊಂದು. ಸಾಧಾರಣವಾಗಿ ಆ ಕನ್ಯೆಯರು ಯಾತ್ರಿಕರ ಕಾಮವಾಸನಾ ತೃಪ್ತಿಯ ಸಾಧನಗಳಾಗಿ ಬಳಕೆಯಾಗುತ್ತಾರೆ. ವೇಶ್ಯಾಗೃಹಕ್ಕೆ ಮಾಡುವುದೂ ಉಂಟು' ಎಂದು ಕೇಳಿದಾಗ ದಯಾನಂದರ ಕಣ್ಣಲ್ಲಿ ನೀರು ಧಾರಾಕಾರವಾಗಿ ಸುರಿಯಿತು.

ಇಡೀ ರಾತ್ರಿ ಚಿಂತಿಸುತ್ತಾ ಕಳೆದ ಅವರು ಊಟವನ್ನೂ ಮರೆತರು. ಬೆಳಗ್ಗೆ ಅವರ ಅನುಯಾಯಿ ವಿಚಾರಿಸಿಕೊಂಡಾಗ, 'ರಾತ್ರಿ ಜಾತ್ರೆಯಲ್ಲಿ ಕಂಡ ಪೈಶಾಚಿಕ ದೃಶ್ಯ ನನ್ನ ಚಿತ್ತವನ್ನು ಕಲಕಿಬಿಟ್ಟಿತು. ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳನ್ನು ಕಾಮಾತುರ ಪಶುಗಳ ತೆಕ್ಕೆಗೆ ತಳ್ಳುವ ಪಿತೃಗಳಿರುವ ಈ ದೌರ್ಭಾಗ್ಯಶಾಲಿ ದೇಶದ ದುರ್ಗತಿಯನ್ನು ಕಂಡು ನನಗೆ ಊಟದ ನೆನಪೇ ಆಗಲಿಲ್ಲ' ಎಂದರು. ಜನರಲ್ಲಿ ಇಂತಹ ಕುರುಡು ನಂಬಿಕೆಯನ್ನು ಬಿತ್ತುವುದನ್ನು ತೀವ್ರವಾಗಿ ಖಂಡಿಸಿ, ಭಾಗಲ್ಪುರದಲ್ಲಿ ಮಹಾಕ್ರಾಂತಿಯನ್ನೇ ಎಬ್ಬಿಸಿದರು.

ಬಹುಶಃ ಇದೇ ಕಾರಣ ಇರಬೇಕು, ಮಗಳ ವಿವಾಹದ ಸಂದರ್ಭದಲ್ಲಿ ವಿವಾಹವನ್ನು ನಡೆಸಿಕೊಡುತ್ತಿದ್ದ ಆರ್ಯಸಮಾಜದ ಕಾರ್ಯಕರ್ತರು, 'ಇದು ಕನ್ಯಾದಾನವಲ್ಲ, ಮಗಳ ಸಂಬಂಧ ನಿಮ್ಮೊಂದಿಗೆ ಕಡಿದು ಹೋಗುವುದಿಲ್ಲ. ತಮ್ಮ ಮಗನ ಗೃಹಸ್ಥಾಶ್ರಮ ಸ್ಥಾಪನೆಗೆ ನಿಮ್ಮ ಮನೆ ಬಾಗಿಲಿಗೆ ಮಗಳನ್ನು ಕೇಳಿ ಬಂದಿದ್ದಾರೆ. ಅವರನ್ನು ಸ್ವಾಗತಿಸಿ. ವರನಿಗೆ ನೀರು ಕೊಡಿ' ಎಂದಿದ್ದರು.



**1916ರಲ್ಲಿ ನಡೆದ ಸಭೆಯೊಂದರಲ್ಲಿ ಪವಿತ್ರ ಕಂಕಣಧಾರಿ ಬಾಲಕರೊಂದಿಗೆ 'ಆರ್ಯ ಸಮಾಜ'ದ ಸದಸ್ಯರು. ಚಿತ್ರ ಸೌಜನ್ಯ: ವಿಕಿಪೀಡಿಯ**

ವಧುವು ಚೆಂಬಿನಲ್ಲಿ ವರನಿಗೆ ನೀರು ನೀಡುತ್ತಾಳೆ. ಆತ ಕಾಲು ಮತ್ತು ಮುಖವನ್ನು ತೊಳೆದು ಒಳಗೆ ಬರುತ್ತಾನೆ. ಇವೆಲ್ಲವನ್ನೂ ಮಣೆಯ ಮೇಲೆ ಕುಳಿತಂತೆಯೇ ಸಾಂಕೇತಿಕವಾಗಿ ಮಾಡಿ ಮುಗಿಸುತ್ತಾರೆ. ಈ ಮಂತ್ರಗಳು, ವಿವರಣೆ ಸಾಧುವಾಗಿ ಕಾಣಿಸಿತು. ಇಂತಹ ಒಂದು ಪ್ರಕ್ರಿಯೆ ಇತಿಹಾಸದ ಯಾವ ತಿರುವಿನಲ್ಲಿ 'ವರಪೂಜೆ'ಯಾಗಿ, ಹೆಣ್ಣಿನ ತಂದೆ ಗಂಡಿನ ಕಾಲು ತೊಳೆಯುವ ಮಟ್ಟಕ್ಕೆ ಹೋಯಿತು ತಿಳಿದಿಲ್ಲ.

ಹದಿನೆಂಟನೇ ಶತಮಾನದಲ್ಲಿ, ಏಳೆಂಟು ವರ್ಷದ ಹೆಣ್ಣುಮಕ್ಕಳಿಗೆ ವಿವಾಹ ಮಾಡುತ್ತಿದ್ದ ಕಾಲದಲ್ಲಿ ದಯಾನಂದರು, 'ಅಪ್ರಾಪ್ತ ಬಾಲಕ–ಬಾಲಿಕೆಯರ ವಿವಾಹಕ್ಕೆ ವೇದಗಳ ಒಪ್ಪಿಗೆಯಿಲ್ಲ' ಎಂದು ಸಾರಿದರು. ಕನ್ಯೆಯೂ ಸಹ ಬಾಲಕನಂತೆಯೇ ಬ್ರಹ್ಮಚರ್ಯವನ್ನು ಪಾಲಿಸಿ ಶಾರೀರಿಕ, ಬೌದ್ಧಿಕ ಹಾಗೂ ಮಾನಸಿಕ ಶಕ್ತಿಗಳನ್ನು ಬೆಳೆಸಿಕೊಂಡ ಮೇಲೆಯೇ ವಿವಾಹಕ್ಕೆ ಯೋಗ್ಯಳಾಗುತ್ತಾಳೆ ಎಂದು ವೇದಗಳ ಮಂತ್ರಗಳನ್ನೇ ಉಲ್ಲೇಖಿಸಿ, ವಿಶ್ಲೇಷಿಸಿ ಘೋಷಿಸಿದರು.

ಮಗಳ ವಿವಾಹದಲ್ಲಿ, ವಧು–ವರ ಇಬ್ಬರೂ ಹೇಳುವ ಒಂದು ಋಗ್ವೇದದ ಮಂತ್ರವಿದೆ:

ಓಂ ಸಮಂಜಂತು ವಿಶ್ವೇ ದೇವಾಃ ಸಂ ಆಪಃ<br>
ಹೃದಯಾನಿ ನೌ<br>
ಸಂ ಮಾತರಿಶ್ವಾ ಸಂ ಧಾತಾ ಸಮು ದೇಷ್ಟ್ರೀ<br>
ದಧಾತು ನೌ

ಇದರ ಅರ್ಥ:

'ವಿಶ್ವದೇವತೆಗಳು... ನಮ್ಮ ಹೃದಯಗಳನ್ನು ಕೂಡಿಸಲಿ'. ಮತ್ತಷ್ಟು ದೇವತೆಗಳ ಹೆಸರುಗಳಿವೆ, 'ಇವರೆಲ್ಲ ನಮ್ಮನ್ನು ಒಟ್ಟಿಗಿಟ್ಟಿರಲಿ'.

ಇಂತಹ ಪ್ರಬುದ್ಧವಾದ ಮಾತುಗಳನ್ನು ಆಡಬೇಕು ಎಂದರೆ ವರ ಮತ್ತು ವಧು ಪ್ರಬುದ್ಧ ವಯಸ್ಸರಾಗಿರಬೇಕು. ದಯಾನಂದರು ಬಾಲ್ಯವಿವಾಹ, ವೃದ್ಧವಿವಾಹ, ಬಹುಪತ್ನಿತ್ವದ ಕಟು ವಿರೋಧಿಗಳಾಗಿದ್ದರು.

ಹಾಗೆಂದು, ವೇದಗಳ ಆಧಾರಿತ ಮಂತ್ರಗಳೆಲ್ಲ ಸಮಾನತೆಯ ಆಶಯವನ್ನು ಸಂಪೂರ್ಣ ಬಿಂಬಿಸುತ್ತವೆ ಎಂದೇನಲ್ಲ. ಇಂದು ಕೂಡಾ ಪಿತೃಪ್ರಧಾನತೆ ನಮ್ಮ ಸಮಾಜವನ್ನು ಬಿಗಿ ಹಿಡಿದಿರುವಾಗ, ಕನಿಷ್ಠ 3500 ವರ್ಷಗಳ ಹಿಂದೆ ರಚಿಸಿದ ವೇದದ ಕಾಲದಲ್ಲಿ ಸರ್ವಸಮಾನತೆ ಇತ್ತು ಎಂದಲ್ಲ. ಆದರೆ ಬಹಳಷ್ಟು ಮಂತ್ರಗಳು ಮುದ ಕೊಡುತ್ತವೆ. ವಿವಾಹವಾಗಿ ವಧು ಪತಿಗೃಹಕ್ಕೆ ಹೋಗುವ ಚಿತ್ರ ಋಗ್ವೇದದ 10ನೇ ಮಂಡಲದ 85ನೇ ಸೂತ್ರದಲ್ಲಿ ಬರುತ್ತದೆ. ಸಂಭ್ರಮದಿಂದ ಹೊರಟ ವಧುವಿನ ಚಿತ್ರವಿದು. ಇಲ್ಲಿ ಬರುವ ಈ ಮಂತ್ರವನ್ನು ಗಮನಿಸಿ:

ಓಂ ಸಮ್ರಾಜ್ಞೀ ಶ್ವಶುರೇ ಭವ ಸಮ್ರಾಜ್ಞೀ ಶ್ವಶ್ರ್ವಾಂ<br>
ಭವ<br>
ನನಾಂದರಿ ಸಮ್ರಾಜ್ಞೀ ಭವ ಸಮ್ರಾಜ್ಞೀ ಅಧಿ<br>
ದೇವೃಷು ಸ್ವಾಹಾ

ಇದರ ಅರ್ಥ, 'ಹೇ ವಧು, ಅತ್ತೆ ಮಾವರಲ್ಲಿ ಸಾಮ್ರಾಜ್ಞಿಯಾಗಿ ಬಾಳು. ನಾದಿನಿ ಮೈದುನರಲ್ಲಿ ಮಹಾರಾಣಿಯಾಗಿ ಬಾಳು'.

ಇಂದಿಗೂ 'ಅತ್ತೆಯ ಮನೆಯಾಗೆ ತೊತ್ತಾಗಿ ಇರಬೇಕು' ಎನ್ನುವುದನ್ನೇ ಒಂದಿಷ್ಟು ಆಧುನಿಕ ರೀತಿಯಲ್ಲಿ ಹೇಳಿ ಕಳುಹಿಸುವಾಗ, 'ಮಹಾರಾಣಿಯಾಗಿ ಬಾಳು' ಎಂದು ಪತಿಯ ಗೃಹಕ್ಕೆ ಬಂದ ವಧುವಿಗೆ ಅಧಿಕಾರವನ್ನು ನೀಡುತ್ತದೆ ಋಗ್ವೇದದ ಮಂತ್ರ!

ಇದಲ್ಲದೆ, ಆರ್ಯಸಮಾಜದ ಕಾರ್ಯಕರ್ತರು ವಿವಾಹ ವಿಧಿಯನ್ನು ಇಂದಿನ ಸಂದರ್ಭಕ್ಕೆ ತಕ್ಕಂತೆ ವಿಶ್ಲೇಷಿಸಿ ವಿವರಿಸುವ ಪರಿಶ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದು ನನ್ನ ಅನುಭವಕ್ಕೆ ಬಂದಿತ್ತು. ಮಗಳ ವಿವಾಹ ನಡೆಸಿದ ಕಾರ್ಯಕರ್ತರ ಬಾಯಲ್ಲಿ ಎಲ್ಲೂ 'ಸುಮಂಗಲೆಯರು ಮುಂದೆ ಬಂದು ಅಕ್ಷತೆ ಹಾಕಿ, ಹೂವು ಸುರಿಸಿ' ಎಂಬ ಪದ ಬರಲಿಲ್ಲ. 'ಮಹಿಳೆಯರು ಬನ್ನಿ' ಎಂದು ಆಹ್ವಾನಿಸಿದರು.